## ಅತ್ಯಾಚಾರಿ ವಿರೋಧಿ ಸಂಚಿಕೆ

'ಅತ್ಯಾಚಾರಕ್ಕೆ ಧಿಕ್ಕಾರ' ಘೋಷಣೆಯೊಂದಿಗೆ ಪ್ರಕಟವಾಗಿರುವ ಡಿ. 19ರ ಸಂಚಿಕೆ ಸಮಯೋಚಿತ ಲೇಖನಗಳ ಗುಚ್ಛ. ವಿವಿಧ ಲೇಖಕರು ಅತ್ಯಾಚಾರ ತಡೆಗಟ್ಟಲು ಹಲವು ಬಗೆಯ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಅವೆಲ್ಲವೂ ಓದಲು–ಕೇಳಲು ಬಲುಚಂದ. ಆದರೆ ಅವುಗಳನ್ನು ತಮ್ಮ ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವ ಬದ್ಧತೆಯುಳ್ಳವರು ಎಷ್ಟು ಜನ ಇದ್ದಾರೆ? ಬಹುಶಃ ಶೇ ಒಂದಕ್ಕಿಂತ ಕಮ್ಮಿ. ಆದುದರಿಂದ ಮನುಷ್ಯ ತನ್ನನ್ನು ತಾನು ಸುಧಾರಿಸಿಕೊಳ್ಳದೇ ಹೋದರೆ ಇವೆಲ್ಲವೂ ವ್ಯರ್ಥ.

—ಎಸ್. ಪಿ. ಶ್ಯಾನಭಾಗ ಬೆಂಗಳೂರು

ಅತ್ಯಾಚಾರ ವಿರೋಧಿ ಸಂಚಿಕೆ ಚೆನ್ನಾಗಿತ್ತು. ಸಮಾಜದ್ರೋಹಿ ಶಕ್ತಿಗಳಿಂದ ಬಚಾವಾಗಲು ವಿದ್ವಾಂಸರು ಮತ್ತು ಸಂಪನ್ಮೂಲ ವ್ಯಕ್ತಿಗಳಿಂದ ಮಹತ್ವಪೂರ್ಣ ಮಾಹಿತಿ ಒದಗಿಸಿದ ಸಂಚಿಕೆ ಇದು. ಅತ್ಯಾಚಾರಿಗಳಿಗೆ ಖಂಡಿತ ಶಿಕ್ಷೆಯಾಗಬೇಕು. ಆದರೆ ನ್ಯಾಯವ್ಯವಸ್ಥೆಯ ಸೂಕ್ಷ್ಮ ವಿಷಯಗಳಿವು. ಹಾಗಾಗಿ ಸಾವಧಾನವಿರಲಿ.

—ಬ.ಗೋ. ಹಂಜಿ, ಜಾಗನೂರು

## ಕುಕೂ ಕುಕ್ಕೂ

ಡಿ.19ರ ಸಂಚಿಕೆಯಲ್ಲಿ ಪ್ರಕಟವಾದ ಡಿ.ಜಿ. ಮಲ್ಲಿಕಾರ್ಜುನ ಅವರ 'ಕುಕೂ ಕುಕ್ಕೂ' ಲೇಖನ ಬಹಳ ಚೆನ್ನಾಗಿತ್ತು. ಬ್ಲಾಕ್ ಫಾರೆಸ್ಟ್ ಕೇಕ್‌ನ ಮೂಲ ಜರ್ಮನಿ ಅಂತ ಎಷ್ಟೋ ಜನರಿಗೆ ಗೊತ್ತಿಲ್ಲ. ನಾವು ಕೇಕ್ ಅನ್ನು ಮಾತ್ರ ಸವಿಯುತ್ತಿದ್ದೆವು. ಅದರ ಮೂಲ ತಿಳಿದಿರಲಿಲ್ಲ.

ಅದರ ಬಗ್ಗೆ ಲೇಖಕರು ಸೊಗಸಾಗಿ ವರ್ಣಿಸಿದ್ದಾರೆ. ಮತ್ತು ಅಲ್ಲಿಯ ತಯಾರಾದ ಕ್ಲಾಕ್‌ನ ಬಗ್ಗೆಯು ತಿಳಿಸಿದ್ದಾರೆ.

—ಸುಜಾತಾ ಬಸವರಾಜ, ಬೆಂಗಳೂರು

## ಕೋಮುದಳ್ಳುರಿ ಮತ್ತು ಆಶಾವಾದ

ಡಿ.26ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಉದಯ್ ಜಾದೂಗಾರ್ ಅವರ 'ಕೋಮಿನ ಸುಳಿಯಲ್ಲಿ' ಕಥೆ ಇಂದಿನ ಪರಿಸ್ಥಿತಿಗೆ ತುಂಬಾ ಪ್ರಸ್ತುತ ಎನಿಸಿತು. ಅದಾರೋ ಹಚ್ಚುವ ಕೋಮಿನ ದಳ್ಳುರಿ ಮತ್ತಾರೋ ಅಮಾಯಕರನ್ನು ಬಲಿ ಪಡೆಯುತ್ತದೆ ಎನ್ನುವುದನ್ನು ಬಹಳ ಅಚ್ಚುಕಟ್ಟಾಗಿ ವಿವರಿಸಿದೆ ಈ ಪ್ರಸಂಗ.

—ಸೌಮ್ಯ ಗಿರೀಶ್

ಉದಯ್ ಜಾದೂಗಾರ್ ತಮ್ಮ ಕಥೆಗಳಲ್ಲಿ ಕೋಮು ದಳ್ಳುರಿಯ ಪರಿಣಾಮವಾಗಿ ನಿರ್ಮಾಣವಾಗಬಹುದಾದ ರಣಭೀಕರ ದಿನಗಳ ಕುರಿತು ಗಮನ ಸೆಳೆದಿದ್ದಾರೆ. 'ಸಾಯ್ಲೇ ಬೇಕು' ಅಂತ ಬಂದು ಬದುಕು ಕಟ್ಟಿಕೊಂಡ ಎಳೆಯ ಜೀವಗಳಿಗೆ ನೀತಿಪಾಠದಂತಿರುವ ಎರಡನೆ ಕಥೆ ಸಹ ಆಶಾವಾದಿ ನೆಲೆಯಲ್ಲಿ ರೂಪುಗೊಂಡಂತಿದೆ. ಎರಡೂ ಭಿನ್ನ ನೆಲೆಯ ಕಥೆಗಳಿಗೆ ಎಸ್. ವಿ. ಹೂಗಾರ್ ಬರೆದ ಚಿತ್ರಗಳು ಅನನ್ಯವಾಗಿವೆ.

—ಪ್ರವೀಣಕುಮಾರ ದೈವಜ್ಞಾಚಾರ್ಯ,
ಹೂವಿನಹಡಗಲಿ



## ನಮ್ಮ ಕನಸು ನಮ್ಮ ಸಂಕಲ್ಪ

ಜ. 2ರ ಸಂಚಿಕೆಯಲ್ಲಿ ರಘುನಂದನ ಅವರು ಬರೆದ 'ಕಾಲ, ದೇಶ, ಲೋಕ, ಜೀವನ, ಧೀ' ಲೇಖನ ಓದಿದೆ. ಅವರಿಗೆ ಕಾಶ್ಮೀರಿ ಪಂಡಿತರ ನೋವು ಗೊತ್ತಿಲ್ಲವೇ? ಅವರು ಕಾಶ್ಮೀರಕ್ಕೆ ಹಿಂದಿರುಗುವುದು ಬೇಡವೇ? ದೂರದ ರೋಹಿಂಗ್ಯಾ ಮುಸ್ಲಿಮರ ಸಮಸ್ಯೆಯನ್ನು ಪ್ರಸ್ತಾಪಿಸುವ ಅವರು ಪಕ್ಕದ ಕೇರಳದಿಂದ ಐಸಿಸ್ ಸೇರಿದ ಮತಾಂಧರನ್ನು ಏಕೆ ಹೆಸರಿಸುವುದಿಲ್ಲ? ಅದು 2020ರಲ್ಲಿ ನಿಲ್ಲಬಾರದೇ? ಉಗ್ರರ ಚಟುವಟಿಕೆಗಳು ನಿಂತು ದೇಶ ನೆಮ್ಮದಿಯ ದಿನಗಳನ್ನು ಕಾಣುವುದು 2020ರ ಕನಸಲ್ಲವೇ? ಯಾಕೀ ಪಕ್ಷಪಾತದ ಮನೋಭಾವ? ಸೈನಿಕರ, ಪೊಲೀಸರ ಜೀವಗಳಿಗೆ ಬೆಲೆ ಇಲ್ಲವೇ?

—ಗಣೇಶ್ ರಾವ್ ನಾಡಿಗೇರ್

ಜ. 2ರ ಸಂಚಿಕೆಯಲ್ಲಿ '2020 ನಮ್ಮ ಕನಸು ನಮ್ಮ ಸಂಕಲ್ಪ' ಲೇಖನಗಳನ್ನು ಓದುವಾಗ ನಗಬೇಕೋ, ಅಳಬೇಕೋ ಗೊತ್ತಾಗಲಿಲ್ಲ. ಲೇಖಕ ಮಹಾಶಯರೊಬ್ಬರು ನಮ್ಮ ದೇಶದಲ್ಲಿ ಬಹುಸಂಖ್ಯಾತರು, ಅಲ್ಪಸಂಖ್ಯಾತರು ತಮಗೆ ವಿಧೇಯರಾಗಿರಬೇಕೆಂದು ಬಯಸುತ್ತಾರೆ ಎಂದಿದ್ದಾರೆ. ಅವರು ಸ್ವಲ್ಪ ಹೊರಜಗತ್ತಿಗೆ ನೋಡಲಿ. ಅಲ್ಪಸಂಖ್ಯಾತರು ಭಾರತದಲ್ಲಿದ್ದಷ್ಟು ಸುರಕ್ಷಿತವಾಗಿ ಯಾವ ದೇಶದಲ್ಲಿ ಇದ್ದಾರೆ ಎಂದು ಹೇಳಲಿ. ಪಾಕಿಸ್ತಾನ, ಬಾಂಗ್ಲಾದಲ್ಲಿ ಅಲ್ಪಸಂಖ್ಯಾತರ ಮೇಲಾಗುತ್ತಿರುವ ದಬ್ಬಾಳಿಕೆ ಬಗ್ಗೆ ಸ್ವಲ್ಪ ತಿಳಿದುಕೊಳ್ಳಲಿ.

—ಪ್ರಸಾದ್ ಬೆಳ್ಳಾರೆ

## ಅಮೂಲ್ಯ ನುಡಿಮುತ್ತುಗಳು

'ಸುಧಾ' ಪತ್ರಿಕೆಯಲ್ಲಿ ಪ್ರಕಟಿಸುವ ಪ್ರತಿಯೊಂದು ನುಡಿಮುತ್ತುಗಳು ಅರ್ಥಪೂರ್ಣ ಹಾಗೂ ಜೀವನಕ್ಕೆ ಬಹಳ ಉಪಕಾರಿಯಾಗಿವೆ. ಪ್ರತಿ ಸಂಚಿಕೆಯಲ್ಲೂ ಸಮುದ್ರದಷ್ಟೇ ದೊಡ್ಡದಿರುವ ಜ್ಞಾನ ಭಂಡಾರದಿಂದ ಈ ಮುತ್ತುಗಳ ಆಯ್ಕೆ ಮಾಡಿ ಪ್ರಕಟಿಸಲಾಗುತ್ತದೆ. ನೊಂದ ಜೀವಕ್ಕೆ ಇಂಥ ಒಂದು ಮಾತು ಔಷಧಿ ಆಗುತ್ತದೆ.

—ಸುನೀತ ಬಾಣಿ

## ಹಿಮಾಚಲ ಪ್ರವಾಸದ ನೆನಪು

ಡಿ.26ರ ಸಂಚಿಕೆಯಲ್ಲಿ ಹಿಮಾಚಲ ಪ್ರವಾಸದ ಅನುಭವ ಚೆನ್ನಾಗಿತ್ತು. 2002ರಲ್ಲಿ ನಾವೂ ಹೋಗಿದ್ದೆವು. ಆಗ ಪ್ರವೇಶ ಶುಲ್ಕ ತೆಗೆದು ಕೊಂಡು ಹಣ್ಣುಗಳು ಬಿಡಿ, ಎಲೆಯೂ ಇರದ ಸೇಬು ತೋಟ ತೋರಿಸಿದ್ದರು. ಹೀಗೆ ಮೋಸಹೋಗಿದ್ದನ್ನು ಎಂದಿಗೂ ಮರೆಯಲಾಗದು.

—ಹೆಚ್. ಜನಾರ್ದನ ಹಂದೆ, ಮಂಗಳೂರು.

## ಕಿಂದರಜೋಗಿ ಕರದಲ್ಲಿ

ಶಿಕ್ಷಕರಾಗಿದ್ದುಕೊಂಡೇ ಒಂದು ಸಂಸ್ಥೆ ಮಾಡುವಷ್ಟು ಕೆಲಸವನ್ನು ಮಾಡಿದ್ದ, ಕನ್ನಡದ ಮಕ್ಕಳ ಮನಸ್ಸನ್ನು ಶ್ರೀಮಂತಗೊಳಿಸಿದ್ದ, ಹತ್ತು ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದ, ಮಕ್ಕಳಿಗಾಗಿ ಕೊನೆಯತನಕ ಬರೆದ ಚಂದ್ರಕಾಂತ ಕರದಳ್ಳಿ ಸ್ಮರಣೆಗೈದ ಮಹತಿಯವರ ಲೇಖನ ಸಮಯೋಚಿತವಾಗಿದೆ.

— ಪಿ. ಜಯವಂತ ಪೈ, ಕುಂದಾಪುರ

## ಕಥಾಸ್ಪರ್ಧೆಗೆ ಆಹ್ವಾನ

ಹುಬ್ಬಳ್ಳಿಯ 'ಅಕ್ಷರ ಸಾಹಿತ್ಯ ವೇದಿಕೆ'ಯು ಡಾ. ಪ್ರಹ್ಲಾದ ಅಗಸನಕಟ್ಟೆಯವರ ಸ್ಮರಣಾರ್ಥವಾಗಿ, ವಿದ್ಯಾರ್ಥಿ/ನಿ ಕಥಾ ಸ್ಪರ್ಧೆ ಏರ್ಪಡಿಸಿದೆ. 25 ವರ್ಷದ ಒಳಗಿನ ಎಲ್ಲ ವಿದ್ಯಾರ್ಥಿ/ನಿಯರೂ ಇದರಲ್ಲಿ ಭಾಗವಹಿಸಬಹುದು. ಬಹುಮಾನವು ₹ 5000 ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ಕತೆಗಾರರು ತಮ್ಮ ಕಾಲೇಜಿನ ಮುಖ್ಯಸ್ಥರಿಂದ ದೃಢೀಕೃತ ಪ್ರಮಾಣ ಪತ್ರದೊಂದಿಗೆ ತಮ್ಮ ಅಪ್ರಕಟಿತ ಸ್ವರಚಿತ ಕಥೆಯೊಂದನ್ನು ಕಳುಹಿಸಬೇಕು. ಮೇಲ್ ಮೂಲಕವೂ ಕಳಿಸಬಹುದು.
**ಕೊನೆಯ ದಿನಾಂಕ:** ಜನವರಿ 30. **ವಿಳಾಸ:** ಅಕ್ಷರ ಸಾಹಿತ್ಯ ವೇದಿಕೆ, # 90, 'ನಾಗಸುಧೆ' 6/ಬಿ ಕ್ರಾಸ್, ಕಾಳಿದಾಸನಗರ, ವಿದ್ಯಾನಗರ ವಿಸ್ತೀರ್ಣ, ಹುಬ್ಬಳ್ಳಿ 580031, **ದೂರವಾಣಿ:** 9845779387 **ಮಿಂಚಂಚೆ:** **sunandakadame@gmail.com**

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in